CICR

# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್, ಮಹಾರಾಷ್ಟ್ರ

*[ ಭಾರತೀಯ ಕೃಷಿ ಅನುಸಂಧಾನ ಪರಿಷದ್ (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ ]*

ICAR

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, 18-24 ಜುಲೈ 2016ರ ಅವಧಿಯಲ್ಲಿ

*"ಈ ಸಲಹೆಯು ಆಯಾ ರಾಜ್ಯಗಳ ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

| ಕರ್ನಾಟಕ | ತಿಂಗಳಿನ ಮಳೆಯ ಪ್ರಮಾಣ (ಮಿ.ಮೀ.) | | | | | | | | | | | | | |
|---|---|---|---|---|---|---|---|---|---|---|---|---|---|---|
| ದಿನಾಂಕ | ವಾಸ್ತವಿಕ ಮಳೆ | | | | | | | | | IMDಯ ಪ್ರಕಾರ ಮುನ್ಸೂಚನೆಯ ಮಳೆ | | | | |
| | 7-13 ಜುಲೈ | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 |
| ಧಾರವಾಡ | 37.8 | 6.4 | 1.8 | 1 | 0.5 | 8.4 | 0 | 1.5 | 1.3 | 3 | 4 | 7 | 3 | 6 |
| ಹಾವೇರಿ | 10.2 | 1.3 | 0.6 | 1.7 | 0.7 | 0 | 0 | 0 | 0.3 | 3 | 7 | 3 | 4 | 8 |
| ಮೈಸೂರು | 18 | 0.7 | 1.2 | 1.2 | 1.4 | 12 | 0 | 4.7 | 3.1 | 3 | 4 | 4 | 3 | 5 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 6-20 | 21-50 | 51-80 | > 80 | http://nwp.imd.gov.in/bias/dist_fcst.htm<br>http://www.accuweather.com/en/in/india-weather |
| | (white) | (green) | (yellow) | (blue) | (purple) | |

### ಸಲಹೆ

ಬಿಟಿ ಹತ್ತಿಯ ಬಿತ್ತನೆಯು ಹತ್ತಿ ಬೆಳೆಯುವ ಎಲ್ಲ ಪ್ರದೇಶಗಳಲ್ಲಿ ಬಹುತೇಕ ಪೂರ್ಣಗೊಂಡಿದೆ. ಈ ವಾರದಲ್ಲಿ ನ ಮೋಡದ ವಾತಾವರಣ ಮತ್ತು ನಿರಂತರ ಮಳೆ ಹತ್ತಿ ಬಿತ್ತನೆ ಗೆ ಸಹಾಯಕವಾಹಿತು. ಬಿತ್ತಿದ ಬೆಲೆಯೂ ಸಸಿ ಹಂತದಲ್ಲಿದೆ. ಆರಂಭಿಕ ಬಿತ್ತನೆಯ ಬೆಳೆ 30 ರಿಂದ 40 ದಿನಗಳ ಹಂತದಲ್ಲಿದೆ. ಬಿಟಿ ಹತ್ತಿ ಬಿತ್ತನೆ ಯನ್ನು ಜುಲೈ ಮುಗಿಯುವವರೆಗೂ ಮುಂದುವರೆಸಬಹುದು. ಹೆಚ್ಚುವರಿ ಸಸ್ಯಗಳನ್ನು ಕಿತ್ತು ಹಾಕುವುದು , ಮೊದಲ ಅಂತರ ಬೇಸಾಯ ಅಥವಾ ಕೈ ಕಳೆ ಕಿತ್ತಲು ಮತ್ತು ಬಿತ್ತನೆಯ ರಸಗೊಬ್ಬರ ನೀಡುವಿಕೆ ಆರಂಭಿಕ ಬಿತ್ತನೆ ಯ ಬೆಳೆಯಲ್ಲಿ ಮುಗಿದಿದೆ. ನಿರಂತರ ಮಳೆ ಯ ಪ್ರದೇಶಗಳಲ್ಲಿ ಹೆಚ್ಚಿನ ಕಳೆಯ ಭಾದೆ ಕಂಡುಬಂದಿದೆ. ಧಾರವಾಡ ಮತ್ತು ರಾಯಚೂರು ಕೃಷಿವಿಶ್ವವಿದ್ಯಾಲಯಗಳ ಈ ಕೆಳಗಿನ ಶಿಫಾರಸುಗಳನ್ನು ಪಾಲನೆ ಮಾಡಬಹುದು: ( 1). ಹೆಚ್ಚಿನ ಕಳೆಯ ಭಾದೆ ಕಂಡುಬಂದಲ್ಲಿ ಮತ್ತು ಕಾರ್ಮಿಕರು ಇಲ್ಲದೆ ಇರುವ ಸಂದರ್ಭದಲ್ಲಿ , ಕಳೆ ಹುಟ್ಟಿದ ನಂತರ ಬಳಸಬಹುದಾದ ಕಳೆನಾಶಕಗಳಾದ ಕ್ವಿಜೋಲ್ಫೋಪ್ ಈಥೈಲ್ ಅನ್ನು ಪ್ರತಿ ಲೀಟರ್ ನೀರಿಗೆ 1 ಮಿಲಿಯಂತೆ ಮತ್ತು ಪೈರಿಥಯೋಬಾಕ್ ಸೋಡಿಯಂ (ಟ್ಯಾಂಕ್ ಮಿಶ್ರಣ) ವನ್ನು ಪ್ರತಿ ಲೀಟರ್ ನೀರಿಗೆ 0.8 ಮಿಲಿಯಂತೆ ಬಳಸಿ ಕಳೆ ನಿಯಂತ್ರಿಸಲು ಸೂಚಿಸಲಾಗಿದೆ. ( 2). ರಸ ಹೀರುವ ಮತ್ತು ಮೂತಿ ಹುಳುವಿನ ಭಾದೆಯು ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವರದಿಯಾಗಿದೆ. ಪ್ರೋಫೆನೋಫಾಸ್ ಪ್ರತಿ ಲೀಟರ್ ನೀರಿಗೆ 2 ಮಿಲಿಯಂತೆ ಸಿಂಪಡಿಸಲು ಮತ್ತು ಹತ್ತಿ ಬೆಳೆಯ ಮೇಲಿನ ಭಾಗದಲ್ಲಿನ ಕಾಂಡದ ಮೂತಿ ಹುಳುವನ್ನು ಬೆಳಗಿನಜಾವ ಮೂತಿ ಹುಳುವನ್ನು ಕೈಯಿಂದ ಆರಿಸಿ ನಾಶಪಡಿಸಲು ಸೂಚಿಸಲಾಗಿದೆ. ( 3). ರಸ ಹೀರುವ ಕೀಟಗಳಾದ ತ್ರಿಪ್ಸ್ ಮತ್ತು ಲೀಫ್ ಹೊಪ್ಪೆರ್ಸ್ ಕೆಲವು ಪ್ರದೇಶಗಳಲ್ಲಿ ಕಂಡುಬಂದಿದೆ. ರೈತರು ಫಿಪ್ರೋನಿಲ್ (1 ಲೀಟರ್ ನೀರಿನ ಲ್ಲಿ 1 ಮಿಲಿ) ಸಿಂಪಡಿಸ ಲು ಸೂಚಿಸಲಾಗಿದೆ.

| ಸಲಹೆ |
|---|
| (4) 30-40 ದಿನಗಳ ಅವದಿಯ ಬೆಳೆಯಲ್ಲಿ ಪ್ರತಿ ಎಕರೆಗೆ 25 ಕಿ.ಗ್ರಾಂ. ಡಿ. ಎ.ಪಿ. ಹಾಗೂ ಯೂರಿಯ, 15 ಕಿ.ಗ್ರಾಂ. ಮ್ಯುರೆಟ್ ಆಫ್ ಪೊಟಾಷ್ ಅನ್ನು ಕಾಂಡದ ಬುಡಕ್ಕೆ ಹಾಕಿ , ಪೋಷಕಾಂಶಗಳ ಉತ್ತಮ ಸದ್ಬಳಕೆಗೆ ಬೋದು ಹೇರಲು ಸೂಚಿಸಲಾಗಿದೆ. ರಾಯಚೂರಿನಲ್ಲಿ ಬೆಳೆಯು ಬಿತ್ತನೆಯ 15 ರಿಂದ 20 ದಿನಗಳ ಹಂತದಲ್ಲಿದೆ. ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ಕಳೆಯ ಭಾದೆ ಕಂಡುಬಂದಿದೆ. ಬೆಳೆಯ ಆರಂಭಿಕ ಹಂತಗಳಲ್ಲಿ ಕಳೆಗಳನ್ನು ತಡೆಗಟ್ಟಲು ಪ್ರತಿ ಹೆಕ್ಟಾರಿಗೆ 3.33 ಲೀಟರ್ ಪೆಂಡಿಮೆಥಾಲಿನ್ ಬಳಸಬಹುದು. ಕಳೆದ ವರ್ಷದ ಗುಲಾಬಿ ಬೀಜಕೋಶದ ಹುಳು (Pink Boll Worm)ವಿನ ಬಾಧೆ ಕಂಡುಬಂದ ಸ್ಥಳೀಯ ಪ್ರದೇಶಗಳಲ್ಲಿ ಶಿಫಾರ ಸ್ಸಿನಂತೆ ಫ್ಟೆರಮೊನ್ ಬಲೆಗಳು ಬಳಸಿ ಕೀಟದ ಮೇಲೆ ಗಮನವಿಡಬಹುದು. ಯಾವುದೇ ರೋಗಗಳು ವರದಿಯಾಗಿಲ್ಲ. |

| ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್ | |
|---|---|
| **ಸಲಹಾ ತಂಡ** | **ಕನ್ನಡ ಅನುವಾದ** |
| ಡಾ. ಕೆ. ಆರ್. ಕ್ರಾಂತಿ, ಡಾ. ಎ. ಎಚ್. ಪ್ರಕಾಶ್, ಡಾ. ಸಂಧ್ಯಾ ಕ್ರಾಂತಿ , ಡಾ. ಡಿ. ಮೋಂಗಾ, ಡಾ. ಡಿ . ಬ್ಲೇಸ್ , ಡಾ . ಸುಮನ್ ಬಾಲ ಸಿಂಗ್, ಡಾ. ಆರ್ . ಬಿ . ಸಿನ್ಗಂಧುಪೆ, ಡಾ. ಎಂ.ವಿ. ವೇಣುಗೋಪಾಲನ್, ಡಾ. ಎ. ಇಸಾಬೆಲ್ಲಾ, ಡಾ. ಎಂ. ಸಬೇಶ್, ಡಾ. ವಿಶ್ಲೇಶ್ ನಗ್ರರೆ, ಡಾ. ರಿಷಿ ಕುಮಾರ್, ಡಾ. ಅನುರಾಧಾ ನರಲ, ಡಾ. ದೀಪಕ್ ನಗ್ರಲೇ, ಶ್ರೀಮತಿ ಸಂಗೀತಾ ಮತ್ತು ಶ್ರೀಮತಿ ಸಚೇತ. | ಡಾ. ಎಚ್. ಬಿ. ಸಂತೋಷ್, ಡಾ. ಟಿ. ಪ್ರಭುಲಿಂಗ, ಡಾ. ಕೆ. ಪಿ. ರಾಘವೇಂದ್ರ ಮತ್ತು ಡಾ. (ಶ್ರೀಮತಿ) ಸವಿತಾ ಸಂತೋಷ್ |
| **ರಾಜ್ಯ ಕೃಷಿ ವಿಶ್ವವಿದ್ಯಾಲಯ ತಂಡ** | |
| ಡಾ (ಶ್ರೀಮತಿ) ಸುನೀತ್ ಪಂಥೇರ್, ಡಾ ಸಂಜೀವ್ ಕುಮಾರ್ ಕಟಾರಿಯಾ, ಡಾ ರಿಶಿಕುಮಾರ್, ಡಾ ರೂಪ್ ಸಿಂಗ್ ಮೀನಾ, ಡಾ ಬಿ ಎಸ್ ನಾಯಕ್, ಡಾ ಪ್ರಶಾಂತ್ ಸಂದಿಪನ್, ಡಾ ಎ ಎನ್ ಪಸ್ಲಾವರ್, ಅರವಿಂದ್, ಡಾ ಪಂದಾಗಲೇ, ಡಾ ಸತೀಶ್ ಪರಸಾಯಿ, ಡಾ ವಿ ಚೆಂಗ ರೆಡ್ಡಿ, ಡಾ ಅಳದಕಟ್ಟಿ, ಡಾ ಎಂ ವೈ ಅಜಯ್ ಕುಮಾರ್, ಡಾ ಸುಬ್ಬಲಕ್ಷ್ಮಿ ಲೋಕನಧನ್, ಡಾ ಎಂ ಗುನಸೆಕರನ್ | |